ಕರ್ನಾಟಕ ವಿಧಾನಸಭೆ

ಶುಕ್ರವಾರ ೩ನೇ ಆಗಸ್ಟ್ ೨೦೦೧ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆ ೪೦ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಾಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

೧. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಕೊಪ್ಪಳ ಜಿಲ್ಲೆಯಲ್ಲಿ ಗೋ ಶಾಲೆಗಳನ್ನು ಮೇವು ಇಲ್ಲದೆ ಬಂದ್ ಮಾಡಿರುವುದು.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾನು ಒಂದು ತುರ್ತು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತಿದ್ದೇನೆ. ಕೊಪ್ಪಳ ಜಿಲ್ಲೆಯಲ್ಲಿ ಗೋಶಾಲೆಗಳನ್ನು ಬಂದ್ ಮಾಡಲಾಗಿದ್ದು, ಸಾವಿರಾರು ದನಕರುಗಳನ್ನು ಅಲ್ಲಿಂದ ವಾಪಸ್ ಕಳುಹಿಸಲಾಗುತ್ತಿದ್ದು, ಅವು ಕಸಾಯಿಖಾನೆಗೆ ಹೋಗುತ್ತಿವೆ.

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಮೊದಲು ಪೂರಕ ಅಂದಾಜುಗಳ ಮೇಲಿನ ಚರ್ಚೆ ಮುಗಿದು ಹೋಗಲಿ; ನಂತರ ನಾನು ಆ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಇದು ಬಹಳ ಪ್ರಾಮುಖ್ಯವಾದಂತಹ ವಿಷಯವಾಗಿದೆ. ಬರಗಾಲ ಕಾಮಗಾರಿಯನ್ನು ತುರ್ತಾಗಿ ನಡೆಸುವುದು ಬಹಳ ಅಗತ್ಯವಾಗಿದೆ. ನಿನ್ನೆ ಮತ್ತು ಈ ದಿನ ಬೆಳಿಗ್ಗೆ ನನಗೆ ಅಲ್ಲಿಂದ ಫೋನ್ ಬಂದಿತ್ತು. ಕೊಪ್ಪಳದಲ್ಲಿ ಮೇವಿಲ್ಲ ಎನ್ನುವ ಕಾರಣಕ್ಕಾಗಿ ನಿನ್ನೆ ೫-೬ ಗೋಶಾಲೆಗಳನ್ನು ಬಂದ್ ಮಾಡಿದ್ದಾರೆ. ಕಳೆದ ೧೫ ದಿವಸಗಳ ಹಿಂದೆ ಗೋಶಾಲೆಗಳನ್ನು ಆರಂಭಿಸಿ ಅಲ್ಲಿಗೆ ದನಕರುಗಳಿಗೆ ಮೇವನ್ನು ಸಪ್ಲೈ ಮಾಡಲಾಗುತ್ತಿತ್ತು. ಆದರೆ ಕೊಪ್ಪಳ ಜಿಲ್ಲಾಧಿಕಾರಿಗಳು ನಮ್ಮ ಕಡೆ ಮೇವಿಲ್ಲ, ಅದು ನಮಗೆ ಸಪ್ಲೈ ಆಗುತ್ತಿಲ್ಲ, ನಾವು ಮೇವು ಒದಗಿಸಲಿಕ್ಕೆ ಅಸಹಾಯಕರಾಗಿದ್ದೇವೆ, ಅದಕ್ಕಾಗಿ ನೀವು ನಿಮ್ಮ ದನಕರುಗಳನ್ನು ಹಿಂತೆಗೆದುಕೊಂಡು ಹೋಗಿ ಎಂದು ರೈತರಿಗೆ ಹೇಳಿದ್ದಾರೆ. ಸಾವಿರಾರು ದನಕರುಗಳು ಗೋಶಾಲೆಗಳಿಂದ ಹೊರಗೆ ಕಳುಹಿಸಲ್ಪಟ್ಟಿವೆ. ರೈತರು ಇದರಿಂದ ಬಹಳ ಸಂಕಷ್ಟಕ್ಕೀಡಾಗಿದ್ದಾರೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಈಗ ತಾನೇ ನಮ್ಮ ಗಮನಕ್ಕೆ ತಂದಿದ್ದಾರೆ. ನಾನು ಆ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆಗೆ ಈಗಲೇ ಮಾತನಾಡಿ ಅನಂತರ ಮತ್ತೆ ನಿಮಗೆ ಅದರ ವಿಚಾರ ತಿಳಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಇದರ ಬಗ್ಗೆ ನಾನು ಇನ್ನೂ ಸ್ವಲ್ಪ ಡೀಟೈಲಾಗಿ ಮಾತನಾಡುವುದಿದೆ.

ಅಧ್ಯಕ್ಷರು: ಮೇವು ಇಲ್ಲ ಎಂಬ ಕಾರಣದಿಂದ ಜಿಲ್ಲಾಧಿಕಾರಿಗಳು ಗೋಶಾಲೆಗಳನ್ನು ಮುಚ್ಚಿದ್ದಾರೆ ಎಂದು ಹೇಳಿದಿರಿ. ಅಷ್ಟೇ ತಾನೇ ನೀವು ಮಾತನಾಡಬೇಕಾಗಿರುವುದು!